All India Radio: Bangalore
National Bulletin In Kannada
01.02.2025 : 07.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

*************

ಮುಖ್ಯಾಂಶಗಳು :

- ಲೋಕಸಭೆಯಲ್ಲಿಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ೨೦೨೫-೨೬ನೇ ಸಾಲಿನ ಕೇಂದ್ರ ಬಜೆಟ್ ಮಂಡನೆ
- ರಾಷ್ಟ್ರಪತಿ ಭವನದಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ವಾರ್ಷಿಕ ಉದ್ಯಾನೋತ್ಸವಕ್ಕೆ ಚಾಲನೆ
- ಪ್ರಯಾಗ್‌ರಾಜ್ ಮಹಾಕುಂಭಮೇಳ; ಉಪರಾಷ್ಟ್ರಪತಿ ಸೇರಿದಂತೆ ೭೩ ದೇಶಗಳ ರಾಜತಾಂತ್ರಿಕರಿಂದ ಇಂದು ಅಮೃತಸ್ನಾನ
- ನವದೆಹಲಿಯ ಭಾರತ್ ಮಂಟಪದಲ್ಲಿ ಇಂದಿನಿಂದ ವಿಶ್ವ ಪುಸ್ತಕ ಮೇಳ ಪ್ರಾರಂಭ
- ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್; ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಸರಣಿಯನ್ನು ವಶಪಡಿಸಿಕೊಂಡ ಭಾರತ

*****

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿಂದು ೨೦೨೫-೨೬ನೇ ಸಾಲಿನ ಕೇಂದ್ರ ಬಜೆಟ್ ಮಂಡಿಸಲಿದ್ದಾರೆ. ಇದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಮೂರನೇ ಅವಧಿಯ ಎರಡನೇ ಬಜೆಟ್ ಆಗಲಿದೆ. ಬಜೆಟ್ ಮಂಡನೆಗೆ ಮುನ್ನ, ನಿನ್ನೆ ಸಂಸತ್ತಿನ ಎರಡೂ ಸದನಗಳಲ್ಲಿ ಆರ್ಥಿಕ ಸಮೀಕ್ಷೆಯನ್ನು ಮಂಡಿಸಲಾಯಿತು. ೨೦೧೯ರಲ್ಲಿ ಅಧಿಕಾರ ವಹಿಸಿಕೊಂಡ ನಂತರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ದಾಖಲೆಯ ಸತತ ಎಂಟನೇ ಬಜೆಟ್ ಮಂಡನೆ ಇದಾಗಿದೆ. ಲೋಕಸಭೆಯಲ್ಲಿ ಮಂಡಿಸಿದ ನಂತರ, ಬಜೆಟ್ ಅನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗುತ್ತದೆ.

ಬಜೆಟ್ ಪೂರ್ವ ಸಮಾಲೋಚನೆಯ ಸಮಯದಲ್ಲಿ, ಹಣಕಾಸು ಸಚಿವರು, ರೈತ ಸಂಘಗಳು ಮತ್ತು ಕೃಷಿ ಅರ್ಥಶಾಸ್ತ್ರಜ್ಞರು, ಕಾರ್ಮಿಕ ಸಂಘಗಳು, ಶಿಕ್ಷಣ ಮತ್ತು ಆರೋಗ್ಯ ವಲಯ, ಎಂಎಸ್‌ಎಂಇ, ವ್ಯಾಪಾರ ಮತ್ತು ಸೇವೆಗಳು, ಕೈಗಾರಿಕೆ, ಅರ್ಥಶಾಸ್ತ್ರಜ್ಞರು, ಹಣಕಾಸು ವಲಯ ಮತ್ತು ಬಂಡವಾಳ ಮಾರುಕಟ್ಟೆಗಳ ತಜ್ಞರು ಮತ್ತು ಪ್ರತಿನಿಧಿಗಳು ಸೇರಿದಂತೆ ಹಲವಾರು ಪಾಲುದಾರರೊಂದಿಗೆ ಸಭೆಗಳನ್ನು ನಡೆಸಿದರು. ೨೦೨೧ರ ಫೆಬ್ರವರಿ ೧ ರಂದು, ಹಣಕಾಸು ಸಚಿವೆ ಸೀತಾರಾಮನ್ ಮೊದಲ ಕಾಗದರಹಿತ ಬಜೆಟ್ ಅನ್ನು ಮಂಡಿಸಿದರು ಮತ್ತು ಅಂದಿನಿಂದ ಡಿಜಿಟಲ್ ಬಜೆಟ್ ಅನ್ನು ಮಂಡಿಸಲಾಗುತ್ತಿದೆ. ಬಜೆಟ್ ಅಧಿವೇಶನದ ಮೊದಲ ಹಂತ ಫೆಬ್ರವರಿ ೧೩ ರವರೆಗೆ ನಡೆಯಲಿದ್ದು, ಎರಡನೇ ಹಂತ ಮಾರ್ಚ್ ೧೦ ರಿಂದ ಏಪ್ರಿಲ್ ೪ ರವರೆಗೆ ನಡೆಯಲಿದೆ.

*****

ರಾಷ್ಟ್ರಪತಿ ಭವನದಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ವಾರ್ಷಿಕ ಉದ್ಯಾನೋತ್ಸವವನ್ನು ಉದ್ಘಾಟಿಸಲಿದ್ದಾರೆ. ಅಮೃತ ಉದ್ಯಾನ ನಾಳೆಯಿಂದ ಸಾರ್ವಜನಿಕರ ವೀಕ್ಷಣೆಗೆ ಮುಕ್ತವಾಗಿರಲಿದೆ. ಸಾರ್ವಜನಿಕರು ಸೋಮವಾರ ಹೊರತುಪಡಿಸಿ, ವಾರದ ಆರು ದಿನ ಬೆಳಗ್ಗೆ ೧೦ ರಿಂದ ಸಂಜೆ ೬ ಗಂಟೆವರೆಗೆ ಉದ್ಯಾನಕ್ಕೆ ಭೇಟಿ ನೀಡಬಹುದು. ವೀಕ್ಷಕರ ಅನುಕೂಲಕ್ಕಾಗಿ ಶಟಲ್ ಬಸ್ ಸೇವೆ ಒದಗಿಸಲಾಗಿದ್ದು, ಈ ಬಸ್ ಬೆಳಗ್ಗೆ ೯.೩೦ ರಿಂದ ಸಂಜೆ ೬ ಗಂಟೆಯ ವರೆಗೆ ಪ್ರತಿ ೩೦ ನಿಮಿಷಗಳಿಗೆ ಒಂದರಂತೆ ಸಂಚರಿಸಲಿದೆ. ಬುಕ್ಕಿಂಗ್ ಮತ್ತು ಉದ್ಯಾನದ ಪ್ರವೇಶ ಉಚಿತವಾಗಿರಲಿದೆ. ಸಾರ್ವಜನಿಕರು ಆನ್‌ಲೈನ್ ಪೋರ್ಟಲ್ **visit.rashtrapatibhavan.gov.in** ಮೂಲಕ ತಮ್ಮ ಭೇಟಿಯನ್ನು ಕಾಯ್ದಿರಿಸಬಹುದು ಅಥವಾ ನೇರವಾಗಿ ಭೇಟಿ ನೀಡಬಹುದು. ಈ ಅಮೃತ ಉದ್ಯಾನ ನಾಳೆಯಿಂದ ಮಾರ್ಚ್ ೩೦ರ ವರೆಗೆ ಸಾರ್ವಜನಿಕರಿಗೆ ಮುಕ್ತವಾಗಿರಲಿದ್ದು, ಉದ್ಯಾನೋತ್ಸವದ ಭಾಗವಾಗಿ ರಾಷ್ಟ್ರಪತಿ ಭವನ ವಿವಿಧತೆಯ ಅಮೃತ ಮಹೋತ್ಸವ ಆಯೋಜಿಸಲಿದೆ.

*****

ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಇಂದು ಪ್ರಯಾಗ್‌ರಾಜ್‌ನ ಮಹಾಕುಂಭಕ್ಕೆ ಭೇಟಿ ನೀಡಲಿದ್ದಾರೆ. ಅವರು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲಿದ್ದಾರೆ. ಭವ್ಯ ಮತ್ತು ದೈವಿಕ ಮಹಾಕುಂಭ ಜಾಗತಿಕ ಗಮನ ಸೆಳೆಯುತ್ತಿದೆ.

ವಿವಿಧ ದೇಶಗಳ ರಾಜತಾಂತ್ರಿಕ ಕಾರ್ಯಾಚರಣೆಗಳ ಮುಖ್ಯಸ್ಥರು ಇಂದು ಮಹಾಕುಂಭಕ್ಕೆ ಭೇಟಿ ನೀಡಲಿದ್ದಾರೆ. ೨೦೨೫ರ ಮಹಾಕುಂಭ ಲಕ್ಷಾಂತರ ಜನರನ್ನು ಆಕರ್ಷಿಸುವ ಮೂಲಕ ಭಾರತದ ಅತಿದೊಡ್ಡ ಆಧ್ಯಾತ್ಮಿಕ ಸಭೆ ಮಾತ್ರವಲ್ಲದೆ ಜಾಗತಿಕ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಬೆಳೆದಿದೆ. ಮೊದಲ ಬಾರಿಗೆ, ೭೩ ದೇಶಗಳ ರಾಜತಾಂತ್ರಿಕರು ಇಂದು ಪ್ರಯಾಗ್‌ರಾಜ್‌ಗೆ ಗಂಗಾ, ಯಮುನಾ ಮತ್ತು ಸರಸ್ವತಿ ನದಿಗಳ ಸಂಗಮವಾದ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಲು ಆಗಮಿಸಲಿದ್ದಾರೆ. ಅವರು ಅಕ್ಷಯವತ್ ಮತ್ತು ಬಡೇ ಹನುಮಾನ್ ದೇವಾಲಯಕ್ಕೂ ಭೇಟಿ ನೀಡಲಿದ್ದಾರೆ. ಬಳಿಕ ಅವರು, ಡಿಜಿಟಲ್ ಮಹಾಕುಂಭ ಅನುಭವ ಕೇಂದ್ರಕ್ಕೂ ಭೇಟಿ ನೀಡಲಿದ್ದಾರೆ. ಇದಕ್ಕೂ ಮೊದಲು, ಹತ್ತು ದೇಶಗಳ ೨೧ ಸದಸ್ಯರ ನಿಯೋಗ ಮಹಾಕುಂಭಕ್ಕೆ ಭೇಟಿ ನೀಡಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿತ್ತು.

*****

ಭಾರತದ ಪ್ರತಿಯೊಬ್ಬ ನಾಗರಿಕ ಸಶಕ್ತನಾದಾಗ ಮಾತ್ರ ವಿಕಸಿತ ಭಾರತ ಗುರಿ ಸಾಕಾರ ಸಾಧ್ಯ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದ್ದಾರೆ. ಚೆನ್ನೈನಲ್ಲಿ ನಿನ್ನೆ ಕಿವುಡ, ಅಂಧರ ವಕಾಲತ್ತು ಮತ್ತು ಉದ್ಯೋಗ ಕುರಿತ ಮೂರನೇ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ವಿಶೇಷಚೇತನರ ಸಬಲೀಕರಣಕ್ಕೆ ಶ್ರಮ ವಹಿಸುತ್ತಿರುವವರನ್ನು ಶ್ಲಾಘಿಸಿದರು. ವಿಶೇಷಚೇತನರಲ್ಲಿ ಹೆಚ್ಚಿನ ಸಾಮರ್ಥ್ಯ ಅಡಗಿದ್ದು, ಸರಿಯಾದ ಪೋಷಣೆಯೊಂದಿಗೆ ರಾಷ್ಟ್ರ ನಿರ್ಮಾಣಕ್ಕೆ ಪೂರಕವಾಗಿಸಬೇಕಿದೆ. ಆಡಳಿತದಲ್ಲಿ ವಿಶೇಷಚೇತನರನ್ನು ತೊಡಗಿಸಿಕೊಂಡು ಅವರ ಮೂಲ ಸಾಮರ್ಥ್ಯ ಅರಿವಿಗೆ ನೀತಿಗಳನ್ನು ರೂಪಿಸಿ, ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಸರ್ಕಾರದ ಅವರ ದೃಷ್ಟಿಕೋನವಾಗಿದೆ ಎಂದರು.

*****

ನವದೆಹಲಿಯ ಭಾರತ್ ಮಂಟಪದಲ್ಲಿ ಇಂದಿನಿಂದ ವಿಶ್ವ ಪುಸ್ತಕ ಮೇಳ ಪ್ರಾರಂಭವಾಗಲಿದೆ. 'ನಾವು ಭಾರತದ ಜನರು' ಪುಸ್ತಕ ಮೇಳದ ಈ ವರ್ಷದ ವಸಂತಗಳನ್ನು ಘೋಷವಾಕ್ಯವಾಗಿದೆ. ಇದು ಭಾರತ ಗಣರಾಜ್ಯದ ೭೫ ವಸಂತಗಳನ್ನು ಸ್ಮರಿಸಲಿದೆ. ರಾಷ್ಟ್ರೀಯ ಪುಸ್ತಕ ಟ್ರಸ್ಟ್ ನಿರ್ದೇಶಕ ಯುವರಾಜ್ ಮಲ್ಲಿಕ್ ಆಕಾಶವಾಣಿಯೊಂದಿಗೆ ಮಾತನಾಡಿ, ೯ ದಿನ ನಡೆಯಲಿರುವ ಪುಸ್ತಕ ಮೇಳವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಈ ಪುಸ್ತಕ ಮೇಳದಲ್ಲಿ ರಷ್ಯಾ, ಫ್ರಾನ್ಸ್, ಅರ್ಜೆಂಟಿನಾ, ಕೊಲಂಬಿಯಾ, ಅಬುದಾಬಿ, ಕತಾರ್ ಸೇರಿದಂತೆ ೫೦ಕ್ಕೂ ಹೆಚ್ಚು ರಾಷ್ಟ್ರಗಳು ಪಾಲ್ಗೊಳ್ಳಲಿವೆ. ೨ ಸಾವಿರ ಪ್ರಕಾಶಕರು ಮತ್ತು ಒಂದು ಸಾವಿರ ಭಾಷಣಕಾರರು ಹಾಗೂ ಸಾವಿರಾರು  ಸಾಹಿತ್ಯ ಪ್ರೇಮಿಗಳು ಮೇಳದಲ್ಲಿ ಭಾಗಿಯಾಗಲಿದ್ದಾರೆ ಎಂದು ಮಲಿಕ್ ಮಾಹಿತಿ ನೀಡಿದರು.

*****

ಭಾರತ ಹಾಗೂ ಅಮೆರಿಕ ನಡುವಿನ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯ ಬಲವರ್ಧನೆಗೆ ಪ್ರಧಾನಿ ನರೇಂದ್ರ ಮೋದಿ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ. ನವದೆಹಲಿಯಲ್ಲಿ ನಿನ್ನೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಪ್ರಧಾನಿ ಅಮೆರಿಕ ಭೇಟಿಯ ವೇಳಾಪಟ್ಟಿಯನ್ನು ಸೂಕ್ತ ಸಮಯ ಬಂದಾಗ ಪ್ರಕಟಿಸಲಾಗುವುದು ಎಂದರು.

***ಧ್ವನಿ***ರಣಧೀರ್ ಜೈಸ್ವಾಲ್

ಮುಂಬೈ ಭಯೋತ್ಪಾದನಾ ದಾಳಿಯ ಅಪರಾಧಿ ತಹವ್ವೂರ್ ರಾಣಾ ಹಸ್ತಾಂತರ ಕುರಿತ ಮಾತನಾಡಿದ ಅವರು, ಜನವರಿ ೨೧ರಂದು ಅಪರಾಧಿಯ ಅರ್ಜಿಯನ್ನು ಅಮೆರಿಕ ಸುಪ್ರೀಂಕೋರ್ಟ್ ವಜಾಗೊಳಿಸಿದ ನಂತರ ಭಾರತ ಹಸ್ತಾಂತರ ಪ್ರಕ್ರಿಯೆ ಕುರಿತು ಅಮೆರಿಕದೊಂದಿಗೆ ಸಮಾಲೋಚಿಸುತ್ತಿದೆ ಎಂದರು.  ಇದೇ ೧೭ರಿಂದ ೨೦ರ ವರೆಗೆ ನವದೆಹಲಿಯಲ್ಲಿ ಭಾರತ ಹಾಗೂ ಬಾಂಗ್ಲಾ ದೇಶದ ಗಡಿ ಭದ್ರತಾ ಪಡೆಗಳ ನಡುವೆ ಡಿಜಿ ಮಟ್ಟದ ಮಾತುಕತೆಗಳು ನಡೆಯಲಿದ್ದು, ಗಡಿ ಸಂಬಂಧಿತ ಸಮಸ್ಯೆಗಳ ಸಮಾಲೋಚನೆ ನಡೆಯಲಿದೆ ಎಂದು ರಣಧೀರ್ ಜೈಸ್ವಾಲ್ ಮಾಹಿತಿ ನೀಡಿದರು.

*****

೨೦೨೫-೨೬ನೇ ಸಾಲಿನ ಕೇಂದ್ರ ಬಜೆಟ್ ಇಂದು ಮಂಡನೆಯಾಗಲಿದೆ. ಕೇಂದ್ರ ಬಜೆಟ್ ಮಂಡನೆಯ ಕಾರ್ಯಕಲಾಪವನ್ನು ಕರ್ನಾಟಕದಲ್ಲಿನ ಎಲ್ಲಾ ಆಕಾಶವಾಣಿ ಕೇಂದ್ರಗಳು ನೇರ ಪ್ರಸಾರ ಮಾಡಲಿವೆ.

ಈ ಹಿನ್ನೆಲೆಯಲ್ಲಿ ಇಂದು ಮಧ್ಯಾಹ್ನದ ರಾಷ್ಟ್ರೀಯ ವಾರ್ತೆಗಳು ೧.೧೦ರ ಬದಲಾಗಿ ೧.೫೦ಕ್ಕೆ ಪ್ರಸಾರವಾಗಲಿದೆ. ಮಧ್ಯಾಹ್ನದ ಪ್ರದೇಶ ಸಮಾಚಾರ ೨.೩೦ ರಿಂದ ೨.೪೫ರವರೆಗೆ ಪ್ರಸಾರವಾಗಲಿದೆ. ಆಕಾಶವಾಣಿ ಬೆಂಗಳೂರು ಪ್ರಾದೇಶಿಕ ಸುದ್ದಿ ವಿಭಾಗದಿಂದ ಇಂದು ರಾತ್ರಿ ೭.೪೫ ರಿಂದ ೮.೪೫ರ ವರೆಗೆ ಕೇಂದ್ರ ಬಜೆಟ್ ಕುರಿತ ನೇರ ಚರ್ಚೆ ಮೂಡಿಬರಲಿದೆ.

*****

ಕೇಂದ್ರ ಸರ್ಕಾರ ಭಾರತದಲ್ಲಿ ನಾಲ್ಕು ಹೊಸ ರಾಮ್‌ಸರ್ ತಾಣಗಳನ್ನು ಸೇರಿಸುವುದಾಗಿ ಘೋಷಿಸಿದ್ದು, ಈ ಸಂಖ್ಯೆ ೮೯ ಕ್ಕೆ ತಲುಪಿದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ವಿಶ್ವ ಜೌಗು ಪ್ರದೇಶಗಳ ದಿನಾಚರಣೆಗೆ ಮುಂಚಿತವಾಗಿ, ತಮಿಳುನಾಡಿನ ಸಕ್ಕರಕೊಟ್ಟೈ ಪಕ್ಷಿಧಾಮ ಮತ್ತು ತೇರ್ಥಂಗಲ್ ಪಕ್ಷಿಧಾಮ, ಸಿಕ್ಕಿಂನ ಖೇಚಿಯೋಪಲ್ರಿ ಜೌಗು ಪ್ರದೇಶ ಮತ್ತು ಜಾರ್ಖಂಡ್‌ನ ಉಧ್ವಾ ಸರೋವರವನ್ನು ದೇಶದ ರಾಮ್‌ಸರ್ ತಾಣಗಳ ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ತಿಳಿಸಿದೆ. ಸಚಿವ ಭೂಪೇಂದರ್ ಯಾದವ್, ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಭಾರತವು ಏಷ್ಯಾದಲ್ಲಿ ಅತಿ ಹೆಚ್ಚು ಮತ್ತು ವಿಶ್ವದಲ್ಲಿ ಮೂರನೇ ಅತಿ ಹೆಚ್ಚು ರಾಮ್‌ಸರ್ ತಣಗಳನ್ನು ಹೊಂದಿರುವ ರಾಷ್ಟ್ರವಾಗಿದೆ ಎಂದು ಹಂಚಿಕೊಂಡಿದ್ದಾರೆ. ೨೦ ರಾಮ್‌ಸರ್ ತಾಣಗಳೊಂದಿಗೆ ತಮಿಳುನಾಡು ಗರಿಷ್ಠ ಸಂಖ್ಯೆಯನ್ನು ಹೊಂದಿದ್ದಕ್ಕಾಗಿ ಅಭಿನಂದಿಸಿದ್ದಾರೆ.

*****

ಪುಣೆಯ ಮಹಾರಾಷ್ಟ್ರ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ನಾಲ್ಕನೇ ಟಿ೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡ ಇಂಗ್ಲೆಂಡ್ ತಂಡವನ್ನು ೧೫ ರನ್‌ಗಳಿಂದ ಸೋಲಿಸಿದೆ. ಆ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ ಮೂರು ಪಂದ್ಯಗಳನ್ನು ಗೆದ್ದು, ಒಂದು ಪಂದ್ಯ ಬಾಕಿ ಇರುವಂತೆ ಸರಣಿ ವಶಪಡಿಸಿಕೊಂಡಿದೆ. ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ, ನಿಗದಿತ ೨೦ ಓವರ್‌ಗಳಲ್ಲಿ ಒಂಬತ್ತು ವಿಕೆಟ್‌ಗಳಿಗೆ ೧೮೧ ರನ್‌ಗಳನ್ನು ಗಳಿಸಿತು. ಹಾರ್ದಿಕ್ ಪಾಂಡ್ಯ ೩೦ ಎಸೆತಗಳಲ್ಲಿ ೫೩ ರನ್‌ಗಳನ್ನು ಗಳಿಸಿದರೆ, ಶಿವಂ ದುಬೆ ೩೪ ಎಸೆತಗಳಲ್ಲಿ ೫೩ ರನ್‌ಗಳನ್ನು ಗಳಿಸಿದರು. ಇಂಗ್ಲೆಂಡ್ ಪರ, ಸಾಕಿಬ್ ಮಹಮೂದ್ ಮೂರು ವಿಕೆಟ್‌ಗಳನ್ನು ಪಡೆದರು.

ಗೆಲುವಿಗೆ ೧೮೨ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಇಂಗ್ಲೆಂಡ್ ಇನ್ನೂ ಎರಡು ಎಸೆತಗಳು ಬಾಕಿ ಇರುವಂತೆ ೧೬೬ ರನ್‌ಗಳಿಗೆ ಆಲೌಟ್ ಆಯಿತು. ಹ್ಯಾರಿ ಬ್ರೂಕ್ ಅವರ ಅರ್ಧಶತಕದ ಹೊರತಾಗಿಯೂ ಇಂಗ್ಲೆಂಡ್ ಸೋಲೊಪ್ಪಿಕೊಂಡಿತು. ಭಾರತದ ಪರ, ರವಿ ಬಿಷ್ಣೋಯ್ ಮತ್ತು ಹರ್ಷಿತ್ ರಾಣಾ ತಲಾ ಮೂರು ವಿಕೆಟ್‌ಗಳನ್ನು ಕಬಳಿಸಿದರು ಹಾಗೂ ವರುಣ್ ಚಕ್ರವರ್ತಿ ಎರಡು ವಿಕೆಟ್‌ಗಳನ್ನು ಪಡೆದರು.ಅತ್ಯುತ್ತಮ ಪ್ರದರ್ಶನ ನೀಡಿ ತಂಡದ ಗೆಲುವಿಗೆ ಕಾರಣರಾದ ಶಿವಂ ದುಬೆ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಸರಣಿಯ ಅಂತಿಮ ಪಂದ್ಯ ನಾಳೆ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿದೆ.

******